160 (385) ಗುರುಪಾದಪ್ಪ ನಾಗಮಾರಪಲ್ಲಿ

ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ರಾಜೀವ್‌ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯದಲ್ಲಿ ನಡೆದಿದೆ ಎನ್ನಲಾದ ಹಗರಣ ಪತ್ತೆಯಾದದ್ದು ಯಾವಾಗ? ಈ ಹಗರಣದ ವಿವರಗಳೇನು?

ಆ) ಇದರಲ್ಲಿ ಭಾಗಿಯಾಗಿರುವವರ ಹೆಸರು ಮತ್ತು ಪದನಾಮದ ವಿವರಗಳೇನು

ಇ) ಈ ಬಗ್ಗೆ ನಡೆಸಲಾಗುತ್ತಿರುವ ವಿಚಾರಣೆ ಈಗ ಯಾವ ಹಂತದಲ್ಲಿದೆ

ಈ) ಈ ಹಗರಣಕ್ಕೆ ಸಂಬಂಧಪಟ್ಟಂತೆ ಇಲ್ಲಿಯವರೆವಿಗೆ ಯಾರ್ಯಾರ ಮೇಲೆ ದೋಷಾರೋಪಣಾ ಪಟ್ಟಿ/ಎಫ್‌ಐಆರ್ ಸಲ್ಲಿಸಲಾಗಿದೆ (ಪೂರ್ಣ ವಿವರಗಳನ್ನು ಒದಗಿಸುವುದು

ಉ) ಆರೋಪ ಪಟ್ಟಿಯನ್ನು ಸಲ್ಲಿಸಿದ ನಂತರವೂ ಸಂಬಂಧ ಪಟ್ಟವರುಗಳನ್ನು ಅವರವರ ಹುದ್ದೆಗಳಲ್ಲಿಯೇ ಮುಂದು ವರೆಸಿರುವುದು ನಿಜವೇ? ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು

ಊ) ಸರಕಾರವು ಈಗಲಾದರೂ ಈ ಬಗ್ಗೆ ಕ್ರಮ ಕೈಗೊಂಡು ಸಂಬಂದಪಟ್ಟವರ ಮೇಲೆ ಕ್ರಮ ಕೈಗೊಳ್ಳುವುದೇ?

ಶ್ರೀ ವಿ ಎಸ್ ಆಚಾರ್ಯ

ಅ) 13 3 2006

ಎಂಬಿಬಿಎಸ್ ಪದವಿ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಗಳಿಸಿರುವ ವಿದ್ಯಾರ್ಥಿಗಳು ಪಿಜಿಇಟಿ 2006 ರಲ್ಲಿ ಅಧಿಕ ಶೇಕಡಾವಾರು ಅಂಕಗಳನ್ನು ಗಳಿಸಿರುತ್ತಾರೆ ದಿನಾಂಕ 13–3–2006 ರ ಸರ್ಕಾರಿ ಆದೇಶ ಸಂಖ್ಯೆ ಆಕುಕ 60 ಎಂಪಿಎಸ್ 2006 ರನ್ವಯ ಪಿ ಜಿ ಇ ಟಿ (ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಪ್ರವೇಶ ಪರೀಕ್ಷೆಯಲ್ಲಿ ನಡೆದಿದೆ ಎಂದು ಆರೋಪಿಸಲಾಗಿರುವ ಅವ್ಯವಹಾರದ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ರಚಿಸಿತು ಸದರಿ ವಿಚಾರಣಾ ಸಮಿತಿಯು ತನ್ನ ಪ್ರಾಥಮಿಕ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ಪ್ರಸ್ತಾವಿತ ಪರೀಕ್ಷೆಗಳು ದೋಷರಹಿತವಾಗಿ ನಡೆದಿರುವುದಿಲ್ಲ ಹಾಗೂ ಗೋಪ್ಯತೆ, ರಹಸ್ಯ, ಸುರಕ್ಷೆ ಮತ್ತು ಮೇಲ್ವಿಚಾರಣೆಯು ಸಾಕಷ್ಟು ಪ್ರಮಾಣದಲ್ಲಿ ಇರಲಿಲ್ಲವೆಂದು ತಿಳಿಸಿರುತ್ತದೆ ಪಿಜಿಇಟಿ ಪರೀಕ್ಷೆಯಲ್ಲಿ ಆರೋಪಿತ ಅವ್ಯವಹಾರದಲ್ಲಿ ತೀವ್ರತರ ಕೈವಾಡ ಇರುವುದಾಗಿ ಸಮಿತಿ ಭಾವಿಸಿದೆ

ಆ) ಎಫ್ ಐ ಆರ್‌ನಲ್ಲಿ ಹೆಸರಿಸಲಾಗಿರುವ ಆರೋಪಿಗಳ ಹೆಸರು, ಪದನಾಮಗಳು ಕೆಳಕಂಡಂತಿವೆ

	ಹೆಸರು	ಪದನಾಮ
1	ಡಾ ಪಿ ಎಸ್ ಪ್ರಭಾಕರನ್	ಉಪಕುಲಪತಿಗಳು
2	ಡಾ ಐ ವಿ ಹುಕ್ಕೇರಿ	ರಿಜಿಸ್ಟ್ರಾರ್
3	ಡಾ ಹನುಮಂತ ಪ್ರಸಾದ್	ಅಸಿಸ್ಟೆಂಟ್ ರೆಜಿಸ್ಟ್ರಾರ್
4	ಡಾ ಹೆಚ್‌ಎಲ್ ರವೀಂದ್ರ ಪ್ರಸಾದ್	ಅಸಿಸ್ಟೆಂಟ್ ರೆಜಿಸ್ಟ್ರಾರ್
5	ಡಾ ಬಿ ಆರ್ ಗೋಪಾಲಕೃಷ್ಣ	ಫೀಲ್ಡ್ ಸೂಪರ್‌ವೈಸರ್
6	ಡಾ ಪ್ರಾಣೇಶ್ ಗುಡರ್	ಅಸಿಸ್ಟೆಂಟ್ ರೆಜಿಸ್ಟ್ರಾರ್
7	ಡಾ ನಿತೀಶ್ ಆರ್ ದೇಸಾಯಿ	ವಿದ್ಯಾರ್ಥಿಗಳು
8	ಡಾ ಆನಂದ್ ಹಳ್‌ಯಾಳ್	
9	ಡಾ ಗಿರಿದರ್ ಎಸ್‌ಎ	

10	ಡಾ ಮೇಖಲ ದ್ವಾರಖಾನಾಥ್	ವಿದ್ಯಾರ್ಥಿಗಳು
11	ಡಾ ಸಂದೀಪ್ ಬಿ ಇ	
12	ಡಾ ನೇಹಾಬನ್ಸಾಲ್	
13	ಡಾ ಎಸ್ ಸಿ ಅಶೋಕ	
14	ಡಾ ಹೆಚ್ ಶ್ರೀನಿವಾಸ್	
15	ಡಾ ಭವಾನಿಎಂ ಹುಲಿನಾಯಕರ್	
16	ಡಾ ಸೀದಾ ರಾಗೋರ್	
17	ಡಾ ಬಬಿತಾ	ವಿದ್ಯಾರ್ಥಿಗಳು
18	ಡಾ ನಂದಿತಾ ಡಿ ಶಟ್ಟಿ	
19	ಡಾ ಹರ್ಷಾ ಎಸ್ ಕೆ	
20	ಡಾ ರಾಮನ್ ಎಮ್ ಹೆಚ್	
21	ಡಾ ಶಾಂತನು ಸಾವಕರ್	
22	ಡಾ ಗಿರಿಶ್ ಬಿ	
23	ಶ್ರೀ ಶಂಕರಣ್ಣ ಮುನವಳ್ಳಿ	ಹೊರಗಿನ ಸಹಕರ್ತ್ಯ
24	ಶ್ರೀ ಚಿಕ್ಕ ಹನುಮಯ್ಯ	--"--
25	ಶ್ರೀ ಮಂಜುನಾದ್	--"--
26	ಶ್ರೀ ವಿನಯ ಕಲವಾಡೆ	--"--
27	ಶ್ರಿ ಕುಲಕರ್ಣಿ ಶ್ರೀನಿವಾಸ್	--"--
28	ಶ್ರೀ ರೆಡ್ಡಿ	--"--
29	ಶ್ರೀ ಶೇಖರ್	--"--
30	ಡಾ ಸುಮಂತ್ ಹೆಗ್ಡೆ	--"--

ಇ) ಪ್ರಕರಣವನ್ನು ಸಿ ಬಿ ಐ ಗೆ ಹಸ್ತಾಂತರಿಸಲಾಗಿದೆ ಮತ್ತು ಸಿ ಬಿ ಐ ದಿನಾಂಕ 4–5–2007 ರಂದು ಎಫ್ಐಆರ್ ದಾಖಲಿಸಿದೆ

ಈ) ಸಿ ಬಿ ಐ ನವರು ಆರೋಪಿತರ ಮೇಲೆ ಎಫ್ಐಆರ್ ದಾಖಲಿಸಿರುತ್ತಾರೆ

ಉ) ಡಾ ವಿ ಐ ಉಕ್ಕೇರಿ ಇವರ ಸೇವೆಯನ್ನು ಹಿಂದಕ್ಕೆ ನೀಡಲಾಗಿದೆ ಕರ್ನಾಟಕದ ಗೌರವಾನ್ವಿತ ಉಚ್ಚ ನ್ಯಾಯಾಲಯದ ತೀರ್ಪಿನನ್ವಯ ಇಬ್ಬರ ಸಹಾಯಕ ರಿಜಿಸ್ಟ್ರಾರ್ ಇವರುಗಳನ್ನು ಅವರವರ ಹುದ್ದೆಗಳಲ್ಲೇ ಮುಂದುವರೆಸಲಾಗಿದೆ

ಊ) ಸಕ್ಷಮನ್ಯಾಯಾಲಯದಿಂದ ಅಂತಿಮ ತೀರ್ಮಾನವನ್ನು ಸರ್ಕಾರ ನಿರೀಕ್ಷಿಸಿದೆ

ವಿಷಯ ಕೊಳವೆಬಾವಿಗಳನ್ನು ಕೊರೆಯದಿರುವುದು

161(388) ಶ್ರೀ ಹೆಚ್ ಹಾಲಪ್ಪ (ಹೊಸನಗರ) ಮಾನ್ಯ ಸಮಾಜಕಲ್ಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಡಿ ದೇವರಾಜ ಅರಸ್ ಅಭಿವೃದ್ಧಿ ನಿಗಮ ಮತ್ತು ಡಾ ಅಂಬೇಡ್ಕರ್ ಅಭಿವೃದ್ಧಿ ನಿಗಮಗಳ ವತಿಯಿಂದ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಕೊಳವೆ ಭಾವಿಗಳ ಫಲಾನುಭವಿಗಳು ಆಯ್ಕೆಯಾಗಿದ್ದು ಇನ್ನೂ ಕೊಳವೆ ಭಾವಿಗಳನ್ನು ಕೊರೆದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಕೊಳವೆ ಬಾವಿಗಳನ್ನು ಕೊರೆಯಲು ತಡವಾಗಿರಲು ಮತ್ತು ಪ್ರಗತಿ ಆಗದಿರಲು ಕಾರಣವೇನು ಹಾಗೂ ಸರ್ಕಾರ ಕೈಗೊಂಡ ಕ್ರಮವೇನು?